0303/0723

**III Semester Three Year LL.B./ VII Semester 5 Year B.A., LL.B./B.B.A., LL.B. Examination, June/July 2015**

**CRIMINAL LAW – II : CRIMINAL PROCEDURE CODE, J.J ACT & P.O ACT**

Duration : 3 Hours Max. Marks : 100

**Instructions** : a. Answer Question No. **9**. and any five of the remaining.

b. Q. No. **9** carries **20** marks and the remaining carry **16** marks **each**.

c. Answers should be written **completely** either in **English** or **Kannada**.

**ಸೂಚನೆಗಳು :** 1. ಪ್ರಶ್ನೆ ನಂ. **9** ಮತ್ತು ಉಳಿದವುಗಳಲ್ಲಿ ಯಾವುದೇ **ಐದು** ಪ್ರಶ್ನೆಗಳಿಗೆ ಉತ್ತರಿಸಿರಿ.

2. ಪ್ರಶ್ನೆ ನಂ. **9**ಕ್ಕೆ **20** ಅಂಕಗಳು ಉಳಿದವುಗಳಿಗೆ ತಲಾ **16** ಅಂಕಗಳು.

3. ಉತ್ತರಗಳನ್ನು **ಸಂಪೂರ್ಣವಾಗಿ ಆಂಗ್ಲ** ಅಥವಾ **ಕನ್ನಡ** ಭಾಷೆಯಲ್ಲಿ ಮಾತ್ರ ಉತ್ತರಿಸಬೇಕು.

Q. No. 1. Explain the powers and jurisdiction of different criminal courts under the Code of Criminal Procedure. Marks : 16

ಅಪರಾಧ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ವಿವಿಧ ಕ್ರಿಮಿನಲ್ ನ್ಯಾಯಾಲಯಗಳಿಗಿರುವ ಅಧಿಕಾರ ಮತ್ತು ಅಧಿಕಾರ ವ್ಯಾಪ್ತಿಗಳನ್ನು ವಿವರಿಸಿ.

Q. No. 2. Explain the powers of Appellate court and the procedure for hearing appeals. Marks : 16

ಮೇಲ್ಮನವಿ ನ್ಯಾಯಾಲಯದ ಅಧಿಕಾರಗಳನ್ನು ಮತ್ತು ಮೇಲ್ಮನವಿಯ ವಿಚಾರಣೆಯ ಪ್ರಕ್ರಿಯೆಯನ್ನು ವಿವರಿಸಿ.

Q. No. 3. "No person shall neglect or refuse to maintain his wife, children and parents". Discuss. Marks : 16

''ಯಾವುದೇ ವ್ಯಕ್ತಿಯು ತನ್ನ ಹೆಂಡತಿ, ಮಕ್ಕಳು ಮತ್ತು ತಂದೆ ತಾಯಿಯರನ್ನು ಸಾಕುವ ಹೊಣೆಗಾರಿಕೆಯನ್ನು ನಿರ್ಲಕ್ಷಿಸುವಂತಿಲ್ಲ ಅಥವಾ ತಿರಸ್ಕರಿಸುವಂತಿಲ್ಲ''. ಚರ್ಚಿಸಿ.

Q. No. 4. State the provision of the Criminal Procedure Code relating to limitation for taking cognizance of offences and explain nature and scope of inherent powers. Marks : 16

ದಂಡ ಪ್ರಕ್ರಿಯಾ ಸಂಹಿತೆಯ ಅಪರಾಧಗಳ ಸಂಜ್ಞೇಯತೆಗೆ ಸಂಬಂಧಿಸಿದ ಕಾಲಪರಿಮಿತಿಯನ್ನು ತಿಳಿಸಿರಿ ಮತ್ತು ಅಂತರ್ನಿಹಿತ ಅಧಿಕಾರದ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸಿ.

Q. No. 5. What are the competent Authorities and Institutions for Juveniles under the Juvenile Justice (care and protection) Act ? Marks : 16

ಬಾಲ ನ್ಯಾಯ (ಕಾಳಜಿ ಮತ್ತು ಸಂರಕ್ಷಣೆ) ಅಧಿನಿಯಮದಡಿ ಬಾಲಕರಿಗಿರುವ ಸಕ್ಷಮ ಪ್ರಾಧಿಕಾರ ಮತ್ತು ಸಂಸ್ಥೆಗಳಾವುವು ?

Q. No. 6. What is the procedure for compelling the appearance of any person before the criminal court ? Marks : 16

ಕ್ರಿಮಿನಲ್ ನ್ಯಾಯಾಲಯದ ಮುಂದೆ ಯಾವುದೇ ವ್ಯಕ್ತಿಯನ್ನು ಹಾಜರುಪಡಿಸಲು ಇರುವ ಪ್ರಕ್ರಿಯೆ ಏನು ?

Q. No. 7. What is bail ? When bail may be granted and when bail may not be granted in non-bailable offences ? Discuss. Marks : 16

ಜಾಮೀನು ಎಂದರೇನು ? ಜಾಮೀನುರಹಿತ ಅಪರಾಧಗಳಲ್ಲಿ ಯಾವಾಗ ಜಾಮೀನು ನೀಡಲಾಗುವುದು ಮತ್ತು ನೀಡಲಾಗುವುದಿಲ್ಲ ? ಚರ್ಚಿಸಿ.

Q. No. 8. Write short note on **any two** of the following : Marks : 8+8=16

(a) Joinder of charges
(b) First Information Report
(c) Irregular proceeding

ಈ ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ.

(a) ದೋಷಾರೋಪಣೆಗಳ ಸೇರ್ಪಡೆ
(b) ಪ್ರಥಮ ವರ್ತಮಾನ ವರದಿ
(c) ಅನುಕ್ರಮವಲ್ಲದ ಪ್ರಕ್ರಿಯೆ

Q. No. 9. Solve **any two** of the following problems : Marks : 10+10=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಯನ್ನು ಬಿಡಿಸಿ :

(a) A Telephonic message was received by an officer-in-charge of a police station reporting the commission of dacoity and requesting for help. The police officer immediately left the police station and rushed to the spot where he recorded detailed statement of the complainant about the occurrence Will the statement be treated as first information report ? Decide.

ಒಂದು ಪೋಲೀಸ್ ಠಾಣೆಯ ಆರಕ್ಷಕ ಅಧಿಕಾರಿಗೆ ದೂರವಾಣಿ ಮುಖಾಂತರ ಡಕಾಯಿತಿ ಜರುಗಿದ ಬಗ್ಗೆ ಮತ್ತು 'ಸಹಾಯ ಕೇಳಿ' ಮಾಹಿತಿ ಬರುತ್ತದೆ. ತಕ್ಷಣ ಆರಕ್ಷಕ ಅಧಿಕಾರಿ ಘಟನಾ ಸ್ಥಳಕ್ಕೆ ಧಾವಿಸಿ ದೂರುದಾರನಿಂದ ವಿವರವಾದ ಹೇಳಿಕೆಯನ್ನು ದಾಖಲಿಸಿಕೊಳ್ಳುತ್ತಾನೆ. ಈ ಹೇಳಿಕೆಯು ಪ್ರಥಮ ವರ್ತಮಾನ ವರದಿ ಆಗುತ್ತದೆಯೇ ? ನಿರ್ಧರಿಸಿ.

(b) M is travelling from Mumbai to Bengaluru by train. During the night, his suitcase is stolen. The theft is discovered at Belagavi. B is caught with the stolen suitcase at Hubballi. Where can 'B' be tried for theft ? Decide.

M ಎಂಬುವವನು ಮುಂಬೈನಿಂದ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿರುತ್ತಾನೆ. ರಾತ್ರಿ ವೇಳೆಯಲ್ಲಿ ಆತನ 'ಸೂಟ್‌ಕೇಸ್' ಕಳ್ಳತನವಾಗುತ್ತದೆ, ಆ ವಿಚಾರ ಆತನಿಗೆ ಬೆಳಗಾವಿಯಲ್ಲಿ ಗೊತ್ತಾಗುತ್ತದೆ. 'B' ಎಂಬ ಕಳ್ಳನನ್ನು ಹುಬ್ಬಳ್ಳಿಯಲ್ಲಿ 'ಸೂಟ್‌ಕೇಸಿನ' ಸಮೇತ ವಶಕ್ಕೆ ಪಡೆಯಲಾಗುತ್ತದೆ. ಯಾವ ನ್ಯಾಯಾಲಯದಲ್ಲಿ ಆತನನ್ನು ವಿಚಾರಣೆಗೊಳಪಡಿಸಬಹುದು ? ತೀರ್ಮಾನಿಸಿ.

(c) An accused is arrested in a bailable offence and he is released on bail. During trial, he absconds and non-bailable warrant is issued against him. The police arrests him and produces him before the court. The defence counsel pleads for his release on bail under section 436(1), CrPC, which provides that a person accused of a bailable offence shall be released on bail. Whether court can release him on bail or not. Decide.

ಒಬ್ಬ ಅಪರಾಧಿಯನ್ನು ಜಾಮೀನು ಕೊಡಬೇಕಾದ ಅಪರಾಧದಲ್ಲಿ ದಸ್ತಗಿರಿ ಮಾಡಲಾಗುತ್ತದೆ ಮತ್ತು ಆತನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸುತ್ತಾರೆ. ವಿಚಾರಣೆಯ ಅವಧಿಯಲ್ಲಿ ಆತನು ತಲೆಮರೆಸಿಕೊಳ್ಳುತ್ತಾನೆ ಮತ್ತು ಸದರಿ ನ್ಯಾಯಾಲಯವು ಆತನ ವಿರುದ್ಧ 'ಜಾಮೀನು ರಹಿತ' ವಾರಂಟ್‌ನ್ನು ಹೊರಡಿಸುತ್ತದೆ. ಪೋಲೀಸರು ಆತನನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಒಪ್ಪಿಸುತ್ತಾರೆ. ಆತನ ವಕೀಲರು Section 436(1) CrPC ಯನ್ನು ಉಲ್ಲೇಖಿಸಿ "ಜಾಮೀನು ಕೊಡಬೇಕಾದ" ಅಪರಾಧದಲ್ಲಿ ಅಪರಾಧಿಯನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲೇಬೇಕು" ಎಂದು ಕೋರುತ್ತಾರೆ. ನ್ಯಾಯಾಲಯವು ಆತನನ್ನು ಬಿಡುಗಡೆ ಮಾಡಬಹುದೋ ಅಥವಾ ಇಲ್ಲವೋ ತೀರ್ಮಾನಿಸಿ.